

# ಹಕ್ಕಿಗಳಿಗೊಂದು ಸ್ವಿಮ್ಮಿಂಗ್ ಪೂಲ್!

ಹಕ್ಕಿಗಳಿಗಾಗಿ ಮನೆಯಂಗಳದಲ್ಲೋ ತಾರಸಿಯಲ್ಲೋ ಕಾಳು ನೀರು ಇಡುವವರಿದ್ದಾರೆ. ಆದರೆ, ಹಕ್ಕಿಗಳಿಗಾಗಿ ಪುಟಾಣಿ ಈಜುಕೊಳ ರೂಪಿಸಿದ ಇಲ್ಲಿನ ಪ್ರಸಂಗ ಪಕ್ಷಿಪ್ರೀತಿಯ ಆರ್ದ್ರ ಮಾದರಿಯೊಂದನ್ನು ನಮ್ಮ ಮುಂದಿಡುತ್ತಿದೆ.

■ ಪ್ರಸಾದ್ ಶೆಣೈ ಆರ್.ಕೆ.

ಬೆಳಗಾದರೆ ಸಾಕು, ನಮ್ಮನೆ ಅಂಗಳದ ಸುತ್ತಲಿರುವ ದಾಸವಾಳದ ಗಿಡ, ಕ್ರೋಟಾನು ಹೂಗಳ ಗಿಡ, ಸೀತಾಫಲ ಮರ, ಅಶೋಕ ಮರದ ತುಂಬೆಲ್ಲಾ ಹಕ್ಕಿಗಳ ಮೇಳ. ಸೂರಕ್ಕಿ, ಸುವ್ವಿ ಹಕ್ಕಿ, ಕಾಜಾಣ, ಕಾಡುಮೈನಾ, ಚಿಟ್ಟೆ ಹಕ್ಕಿಗಳು ಸಾಮೂಹಿಕ ಭೋಜನಕ್ಕೆ ಸೇರುವಂತೆ ಹಿಂಡು ಹಿಂಡಾಗಿ ಸೇರಿ ಒಂದೇ ಸಮನೆ ಹಾಡು ಹಾಡಲು ತೊಡಗುತ್ತದೆ. ಆ ಸಾಮೂಹಿಕ ಗಾನದಿಂದ ಸುತ್ತಲಿನ ಪರಿಸರವೊಮ್ಮೆ ವಿಚಿತ್ರ ಮಾಧುರ್ಯದಿಂದ ಕಂಪಿಸಿ ಭೂಲೋಕವೇ ಸ್ವರ್ಗದಂತಾಗುತ್ತದೆ. ಇಷ್ಟೊಂದೆಲ್ಲ ಹಕ್ಕಿಗಳು ಸೇರುವುದು ಬರೀ ಹಣ್ಣನ್ನು ತಿನ್ನುವುದಕ್ಕೆ, ಹೂಗಳ ಮಕರಂದ ಹೀರುವುದಕ್ಕಲ್ಲ. ದಾಸವಾಳ ಗಿಡದ ಕೆಳಗಿರುವ ಪುಟ್ಟ ಈಜುಕೊಳದಲ್ಲಿ ಮನದಣಿಯೆ ಈಜಾಡುತ್ತ, ತಮ್ಮ ಮರಿಗಳಿಗೆ ಈಜು ಕಲಿಸುತ್ತ, ಜಳಕದ ಪುಳಕಕ್ಕಾಗಿ ಹಲವು ಹಕ್ಕಿಗಳು ಪ್ರತಿ ದಿನವೂ ನಮ್ಮ ಮನೆಯ ಈಜುಕೊಳಕ್ಕೆ ಬರುತ್ತವೆ.

ಸುಮಾರು ಒಂದು ವರ್ಷದಿಂದ ಹಕ್ಕಿಗಳಿಗೊಂದು ಪುಟ್ಟ ಈಜು ಕೊಳ ನಿರ್ಮಿಸಬೇಕು, ಅಲ್ಲಿಗೆ ಬಣ್ಣದ ಬಣ್ಣದ ಹಕ್ಕಿಗಳು ಬರಬೇಕು, ಹಾಗೆ ಬರುವ ರೆಕ್ಕೆಯ ಮಿತ್ರರುಗಳನ್ನು ಕಣ್ತುಂಬಿಕೊಂಡು, ಸಾಧ್ಯವಾದರೆ ಎಲ್ಲಾದರೂ ಮರೆಯಲ್ಲಿ ನಿಂತುಕೊಂಡು ಅವರನ್ನು ಕ್ಯಾಮೆರಾ ಕಣ್ಣಲ್ಲಿ ತುಂಬಿಕೊಳ್ಳಬೇಕು ಅಂತೆಲ್ಲಾ ಯೋಚಿಸುತ್ತಲೇ ಇದ್ದೆ. ಪ್ಲಾಸ್ಟಿಕ್ ಪಾತ್ರೆಯನ್ನೇ ಈಜುಕೊಳದಂತೆ ಮಾಡಲು ಮನಸ್ಸು ಬರಲಿಲ್ಲ. ಪ್ಲಾಸ್ಟಿಕ್ ಅನ್ನು ಆದಷ್ಟು ಪರಿಸರದಿಂದ ದೂರವಿಡಬೇಕು ಅಂತೆಲ್ಲ ವೇದಾಂತ ಮಾತನಾಡಿ ಇದೀಗ ಹಕ್ಕಿಗಳಿಗೆ ಪ್ಲಾಸ್ಟಿಕ್ ಕೊಳ ಮಾಡುವುದು ಧರ್ಮವಲ್ಲ ಅನ್ನಿಸಿತು.

ಒಂದು ದಿನ ಅಂಗಳದ ಒಂದು ಮೂಲೆಯಲ್ಲಿ ಮಣ್ಣಿನ ಮುದ್ದೆಯೊಳಗೆ ಹೂತು ಹೋಗಿದ್ದ ಕಲ್ಲಿನ ಮರಿಗೆ ಕಂಡದ್ದೇ, ಆ ಮರಿಗೆಯನ್ನೇ ಜೀರ್ಣೋದ್ಧಾರ ಮಾಡಿ ಹಕ್ಕಿಗಳ ಸ್ವಿಮ್ಮಿಂಗ್ ಪೂಲಾಗಿ ಬಳಸಬಹುದಲ್ಲ ಅನ್ನಿಸಿತು. ಹಿಂದಿನ ಕಾಲದಲ್ಲಿ ಗೋವುಗಳಿಗೆ ನೀರು ಕುಡಿಯಲು ಇಡುತ್ತಿದ್ದ ಕಲ್ಲಿನ ಮರಿಗೆ ಕಾಲಕ್ರಮೇಣ ಮಣ್ಣಿನ ಆಳದಲ್ಲಿ ಹೂತುಹೋಗಿದ್ದರಿಂದ ಒಮ್ಮೆ ಆ ಕಲ್ಲಿನ ಇಡೀ ಮೂತಿ ನೋಡಬೇಕಾದರೆ ಸಾಕೋ ಸಾಕಾಗಿ ಹೋಯಿತು. ಕೊನೆಗೆ ಸತತ ಪ್ರಯತ್ನದಿಂದ ಕಲ್ಲು ಮೇಲೆ ಬಂತು. ಎಷ್ಟೋ ವರ್ಷಗಳಿಂದ ಮಣ್ಣಿನ ಸಖ್ಯದಲ್ಲಿದ್ದ ಆ ಕಲ್ಲ ಮರಿಗೆಯೂ ಮಣ್ಣಿನ ಸಹವಾಸ ದೋಷದಿಂದ ಮಣ್ಣೇ ಆಗಿ ಹೋದಂತಿತ್ತು. ಅದರ ಮೈಯನ್ನು ಶುಚಿ ಮಾಡಿ ನೀರಿನಿಂದ ಚಕ ಚಕ ತೊಳೆದು ಅದು ಮತ್ತೆ ತನ್ನ ಹಳೆ ರೂಪ ತೋರಿಸಿದಾಗ ನನ್ನ ಮನಸ್ಸು ಒಮ್ಮೆ ಅದೇ ಕಲ್ಲಿನಂತೆ ಫಳಫಳವಾಯಿತು.

ಕಲ್ಲಿನ ಹೊಸ ಈಜುಕೊಳಕ್ಕೆ ಇವತ್ತೇ ಚಾಲನೆ ನೀಡಬೇಕೆಂದು ಒಂದು ಕೊಡಪಾನ ನೀರು